# ಭಾರತೀಯ ಸಂಸ್ಕೃತಿಯಲ್ಲಿ ಮಾತೃತ್ವದ ಪರಿಕಲ್ಪನೆ

## Bharatiya Samskrutiyalli Maatrutvada Parikalpane

**Dr.Bharati TC, Associate Professor, Dept. of Kannada, Govt.First Grade College, Ayanur**
**ಡಾ.ಭಾರತಿ.ಟಿ.ಸಿ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಯನೂರು**

ಭಾರತವು ಇಡೀ ವಿಶ್ವದಲ್ಲೆ ಒಂದು ವೈವಿಧ್ಯಪೂರ್ಣವಾದ ಸಂಸ್ಕೃತಿಯನ್ನು ಒಳಗೊಂಡಿದೆ. ಆ ವಿಶಿಷ್ಟ ಸಂಸ್ಕೃತಿಯ ಕಾರಣದಿಂದಲೇ ಅದು ಉನ್ನತವಾದ ಸ್ಥಾನವನ್ನು ಮತ್ತು ಮನೋಭಾವನೆಯನ್ನು ಸೃಷ್ಟಿಸಿಕೊಂಡಿದೆ. ಭಾರತದ ಅತ್ಯಂತ ಸಂಕೀರ್ಣವಾದ ಸಂಸ್ಕೃತಿಯ ಸ್ವರೂಪವನ್ನು ಅಧ್ಯಯನ ಮಾಡುವುದು ಒಂದು ಕಷ್ಟದ ಕೆಲಸವೇ ಸರಿ. ಈ ಸಂಸ್ಕೃತಿಯ ಸ್ವರೂಪದ ಹರಹು; ಶಾಸನಗಳು, ಜನಪದ ಸಾಹಿತ್ಯ, ವಾಸ್ತುಶಿಲ್ಪ, ಶಿಲ್ಪಕಲೆ, ಸಂಗೀತ, ಚಿತ್ರ, ನಾಟ್ಯ, ಧಾರ್ಮಿಕ ಗ್ರಂಥಗಳು, ಪುರಾಣಗಳು, ಮಹಾಕಾವ್ಯಗಳು ಎಲ್ಲವನ್ನೂ ಒಳಗೊಳ್ಳುತ್ತದೆ. ಇವುಗಳ ಆದ್ಯಂತಗಳ ಸಮಗ್ರ ಅಧ್ಯಯನ ಬಹುಶಃ ಕಷ್ಟಸಾಧ್ಯ. 'ಸಂಸ್ಕೃತಿ' ಎಂಬ ಪದವೇ ಬಹುಮುಖಿ ಅರ್ಥವನ್ನು ಹೊಂದಿದೆ. ಇದು ಒಬ್ಬ ವ್ಯಕ್ತಿಯ, ಒಂದು ಸಮಾಜದ, ಒಂದು ದೇಶದ ಆಂತರಿಕ ವಿಕಾಸಕ್ಕೆ ಕಾರಣವಾಗುತ್ತದೆ. ಇದು ಒಟ್ಟು ಜನಜೀವನದ ಅಂತರಂಗದ ಅನುಭವವಾಗಿರುತ್ತದೆಂದು ಹೇಳಬಹುದು. ಅದುದರಿಂದಲೇ ಸಂಸ್ಕೃತಿಯಲ್ಲಿ ಆನಂದರೂಪಿಯಾದ ಭಾವನಾತ್ಮಕ ಅನುಭವಗಳು ವ್ಯಕ್ತಗೊಳ್ಳುತ್ತಿರುತ್ತದೆ. "ಸಂಸ್ಕೃತಿ, ಪ್ರಧಾನವಾಗಿ ಭಾವನಿಷ್ಠವಾದುದು. ವಸ್ತುನಿಷ್ಠವಾದ ಅನುಭವ, ಭಾವನಿಷ್ಠವಾದ ಪ್ರತಿಭೆಯಿಂದ ದೀಪ್ತವಾಗಿ ಹೊರಹೊಮ್ಮುತ್ತದೆ. ಸಂಸ್ಕೃತಿಯಲ್ಲಿ ಅದರ ಬೆಲೆ ಕಟ್ಟಬೇಕಾದರೆ ಅವೆರಡನ್ನು ಅರಿಯುವ ಬುದ್ಧಿಶಕ್ತಿಯ ಜೊತೆಗೆ, ಅನುಭವಿಸುವ ತನ್ಮಯತೆಯೂ ಬೇಕು. ಅದಿಲ್ಲದ ಹೊರತು ನಿಜವಾದ ಬೆಲೆಯನ್ನು ಕಂಡುಕೊಳ್ಳಲಾರೆವು"[೧] ಸಂಸ್ಕೃತಿಯೆಂಬುದು ಮನುಷ್ಯನ ಸ್ವಭಾವಕ್ಕೆ ಸಂಸ್ಕಾರವನ್ನು ಕೊಡುವ ಒಂದು ಉದಾತ್ತ ಬಯಕೆ ಮತ್ತು ಶಕ್ತಿಯಾಗಿದೆ. "The noble aspiration to leave the world better and happier than we found it" [೨] ಎಂದು ಮ್ಯಾಥ್ಯೂ ಆರ್ನಾಲ್ಡ್‌ರವರು ತಮ್ಮ 'Culture and Anarchy' ಎಂಬ ಗ್ರಂಥದಲ್ಲಿ ಅಭಿಪ್ರಾಯಪಡುತ್ತಾರೆ. ಸಂಸ್ಕೃತಿಯು ಒಳಗೊಳ್ಳುವ ಅಂಶಗಳೆಲ್ಲವೂ ಒಬ್ಬ ಮನುಷ್ಯನನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುತ್ತದೆ. ಅದಕ್ಕೆ ವ್ಯಕ್ತಿಯ ಸ್ವಯಂ ಪ್ರಯತ್ನವೂ ಮುಖ್ಯವಾಗುತ್ತದೆ. ವಿದ್ಯೆಯಿಂದ ಪಡೆವ ಸಂಸ್ಕೃತಿ, ದಿನನಿತ್ಯದ ಜೀವನಾನುಭವಗಳಿಂದ ಪಡೆವ ಜೀವಂತ ಸಂಸ್ಕೃತಿ ಎರಡರ ದಿವ್ಯಪಾಕದಿಂದ ಮನುಷ್ಯನಿಗೆ ಒಂದು ಮಹಾವ್ಯಕ್ತಿತ್ವ ಸಿದ್ಧಿಸುತ್ತದೆ. ಸಂಸ್ಕೃತಿಯೆಂಬುದು ಸರ್ವವನ್ನು ತನ್ನ ತೆಕ್ಕೆಗೆ ಬಾಚಿಕೊಳ್ಳುವ ಒಂದು ವಿರಾಟ್ ಶಕ್ತಿಯಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಮಾತೃತ್ವದ ಪರಿಕಲ್ಪನೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ, ಸಂಸ್ಕೃತಿಯು ಭಾವನಿಷ್ಠವಾದುದೆಂಬ ಪ್ರಜ್ಞೆಯು ಅತಿ ಮುಖ್ಯವಾದುದೆಂದು ಭಾವಿಸುತ್ತೇನೆ. ಭಾರತೀಯ ಸಂಸ್ಕೃತಿಯು ಬೇರೆಲ್ಲ ಸಂಸ್ಕೃತಿಗಳಿಗಿಂತ ಅತ್ಯಂತ ಭಾವನಾತ್ಮಕವಾದುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯು ಅತ್ಯಂತ ಪೂಜ್ಯನೀಯಳಾಗಿದ್ದು, ಆಕೆಯನ್ನು ಉನ್ನತವಾದ ಭಾವನೆಯಿಂದ ನಡೆಸಿಕೊಳ್ಳುತ್ತಿದ್ದುದರ ವಿವರಗಳು ವೇದಗಳ ಕಾಲದಿಂದಲೂ ನಮಗೆ ದೊರಕುತ್ತದೆ. ಒಂದು ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ಹುಟ್ಟಿದ ಪರಿಕಲ್ಪನೆಗಳು ಸಾರ್ವಕಾಲಿಕವಾಗದೆ ಬದಲಾವಣೆಗಳಿಗೆ ಒಳಪಟ್ಟರೂ, ಅದಕ್ಕೆ ಸಾಂದರ್ಭಿಕವಾದ ಅಂಶಗಳು ಕಾರಣವಾಗಿರುತ್ತವೆ. ವಿಶ್ವದ ಇತಿಹಾಸದಲ್ಲೂ ಮಾನವ ತನ್ನ ಅಸ್ತಿತ್ವಕ್ಕೆ ಕಾರಣವಾದ ಮಾತೃಶಕ್ತಿಗೆ ಅನಾದಿಕಾಲದಿಂದಲೂ ನಮಿಸುತ್ತಾ ಬಂದಿದ್ದಾನೆ. ಎಲ್ಲಾ ದೇಶಗಳ ಸಂಸ್ಕೃತಿಯಲ್ಲಿಯೂ 'ಮಾತೃಪೂಜೆ' ಯು ನಡೆದುಕೊಂಡು ಬಂದಿದೆ. ಬದುಕಿನ ರೀತಿ ನೀತಿಗಳಲ್ಲಿ, ಆಚಾರ ವಿಚಾರಗಳಲ್ಲಿ, ನಡೆ–ನುಡಿ–ನಂಬಿಕೆಗಳ ನೆಲೆಯಲ್ಲಿ, 'ಮಾತೃಪೂಜೆ'ಯ ವಿಧಿ ವಿಧಾನಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದಾದರೂ, ಇದರ ಹಿಂದೆ ತುಡಿಯುವ ಮನಸ್ಸುಗಳ ಭಾವನೆಯು ಒಂದೇ ಆಗಿದೆ. ಭಾರತೀಯ ಸಂಸ್ಕೃತಿಯಲ್ಲಿಯು ಪ್ರಾಚೀನ ಕಾಲದಿಂದಲೂ ಮಾತೃದೇವತೆಗಳ, ಶಕ್ತಿ ದೇವತೆಗಳ ಆರಾಧನೆ ನಡೆದುಬಂದಿದೆ. ಸೃಷ್ಟಿಯ ವಲಯದಲ್ಲಿ ಪ್ರಕೃತಿ ಮತ್ತು ಪುರುಷ ಎಂಬ ಎರಡು ಶಕ್ತಿಗಳಿವೆ. ಆ ಶಕ್ತಿಗಳಲ್ಲಿ ಪುರುಷನಿಗಿಂತ ಪ್ರಕೃತಿ ಪಾತ್ರವೇ ದೊಡ್ಡದೆಂದು ಭಾರತೀಯ ಚಿಂತನಧಾರೆಯು ಸ್ಪಷ್ಟಪಡಿಸುತ್ತದೆ. ಮನುಷ್ಯನ ಅಸ್ತಿತ್ವಕ್ಕೆ ಕಾರಣವಾದಂತಹ ತಾಯಿಯನ್ನು, ಕರುಳ ಕುಡಿಗಳಿಗಾಗಿ ಬದುಕನ್ನೇ ವ್ರತವನ್ನಾಗಿ ಮಾಡಿಕೊಂಡ ತಾಯಿಯನ್ನು; ಅವಳ ಪ್ರೇಮ, ತ್ಯಾಗ, ರಕ್ಷಕ, ಚೇತನವನ್ನು ಭಾರತೀಯರು ಆರಾಧಿಸಿದ್ದಾರೆ. ಮನುಷ್ಯನನ್ನು ಮೃಗತ್ವದಿಂದ ಮಾನವತ್ವದ ಕಡೆಗೆ ಕೈಹಿಡಿದು ನಡೆಸುವವಳು ತಾಯಿ, ಅವನನ್ನು ಉದ್ಧರಿಸುವವಳು ತಾಯಿ ಎಂಬ ನಂಬಿಕೆ ಭಾರತೀಯರದ್ದು. ತಾಯಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ರೂಪಿಸುವಲ್ಲಿ ಮತ್ತು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾಳೆ. ಆದುದರಿಂದಲೇ ನಮಗೆ "ಮಾತೃದೇವೋಭವ" ಎಂದು ಮಾತೃತ್ವವನ್ನು, ತಾಯಿಯನ್ನು ದೈವಿಕ ನೆಲೆಯಲ್ಲಿ ಪರಿಭಾವಿಸಲು ಸಾಧ್ಯವಾಯಿತು.

ವೈದಿಕ ನೆಲೆಯಲ್ಲಿ ಮತ್ತು ವೈದಿಕೇತರ ನೆಲೆಗಳಲ್ಲಿ ಮಾತೃತ್ವ ಪರಿಕಲ್ಪನೆ ಬೆಳೆದು ಬಂದ ರೀತಿಯನ್ನು, ಜನಪದ ಸಾಹಿತ್ಯದಲ್ಲಿ ಬದುಕಿನ ಒಂದು ಮೌಲ್ಯವಾಗಿ ಬಿಂಬಿತವಾದ ಮಾತೃತ್ವವನ್ನು ಈ ಭಾಗದಲ್ಲಿ ಅಧ್ಯಯನ ಮಾಡಿದ್ದೇನೆ.

### ವೈದಿಕ ನೆಲೆಯಲ್ಲಿ

ಭಾರತೀಯ ಸಂಸ್ಕೃತಿಯನ್ನು ಅರಿಯಲು ಇರುವ ಅತ್ಯಂತ ಪ್ರಾಚೀನವಾದ ಗ್ರಾಂಥಿಕ ಆಧಾರವೆಂದರೆ ವೇದಗಳು. ಇವುಗಳ ರಚನೆಯ ಕಾಲ ನಿರ್ದಿಷ್ಟವಾಗಿ ಹೇಳಲಾಗದಿದ್ದರೂ, ಕ್ರಿ.ಪೂ. **1000** ದ ಹೊತ್ತಿಗಾಗಲೇ ಋಗ್ವೇದ ರಚಿತವಾಗಿತ್ತೆಂಬುದು ವಿದ್ವಾಂಸರ ಅಭಿಮತವಾಗಿದೆ. ಈ ವೇದಗಳು, ಉಪನಿಷತ್ತುಗಳು, ವೇದಾಂಗಗಳು, ಸ್ಮೃತಿಗಳು, ಆಗಮಗಳು, ಪುರಾಣಗಳು ಭಾರತದ ಜನಜೀವನದ ಸ್ವರೂಪವನ್ನು ನಿರ್ಧರಿಸುವಲ್ಲಿ ಸಹಾಯ

ಮಾಡುತ್ತವೆ. ಇವುಗಳಲ್ಲಿ ಆ ಕಾಲದ ಸ್ತ್ರೀಯರ ಸ್ಥಾನಮಾನ, ಗೌರವಾದರಗಳು ಪೂಜ್ಯನೀಯ ಸ್ಥಾನ ಎಲ್ಲವೂ ಉಕ್ತವಾಗಿವೆ. ಅಂದು 'ಮಾತೃದೇವೋಭವ' ಎಂದು ತಾಯಿಯನ್ನು ದೈವಿಕ ನೆಲೆಯಲ್ಲಿ ಪರಿಭಾವಿಸಲಾಗುತ್ತಿತ್ತು. " ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂದು ತಾಯಿಯನ್ನು, ತಾಯಿ ನಾಡನ್ನು ಸ್ವರ್ಗಕ್ಕಿಂತ ಶ್ರೇಷ್ಠ ಎಂದು ಭಾವಿಸಲಾಗುತ್ತಿತ್ತು. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಎಲ್ಲಿ ನಾರಿಯನ್ನು ಪೂಜ್ಯ ಭಾವನೆಯಿಂದ ಕಾಣಲಾಗುವುದೋ ಅಲ್ಲಿ ದೇವತೆಗಳು ಸಂತೋಷದಿಂದ ನೆಲೆಸಿರುತ್ತಾರೆಂಬುದು, 'ದ್ಯಾವಾ ಪೃಥಿವೀ' ಎಂದು ಭೂಮಿ ತಾಯಿಯನ್ನು ಮಾತೃನೆಲೆಯಿಂದ ಗುರುತಿಸುವುದು ಭಾರತೀಯ ಸಂಸ್ಕೃತಿಯ ಉನ್ನತವಾದ ಸಂಸ್ಕಾರವನ್ನು ತೋರ್ಪಡಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ನಾರಿಯನ್ನು ಮೂರು ರೂಪಗಳಲ್ಲಿ ಗುರುತಿಸಲಾಗುತ್ತದೆ. ಕನ್ಯಾವಸ್ಥೆ, ಭಾರ್ಯರೂಪ, ಹಾಗೂ ಮಾತೃರೂಪ ಎಂಬುದಾಗಿ ಗುರುತಿಸುತ್ತಾ; ಕನ್ಯಾವಸ್ಥೆ, ಭಾರ್ಯಾರೂಪಗಳು ನಾರಿಯರ ಸಾಧನಾವಸ್ಥೆ ಎಂತಲೂ, ತಾಯಿಯಾಗಿ ಅವರು ಸಿದ್ಧಾವಸ್ಥೆಯನ್ನು ತಲುಪುತ್ತಾರೆಂತಲೂ ವೇದಗಳಲ್ಲಿ ಹೇಳಲಾಗುತ್ತಿತ್ತು. ಹೀಗೆ ಮಾತೃತ್ವವನ್ನು ವೇದಗಳ ಕಾಲದಲ್ಲಿ ಬಹಳ ಉನ್ನತವಾಗಿಯೇ ಭಾವಿಸಲಾಗುತ್ತಿತ್ತು.

ಕ್ರಿ.ಪೂ. **1000** ದ ಹೊತ್ತಿಗಾಗಲೇ ರಚಿತವಾಗಿತ್ತೆಂದು ಹೇಳಲ್ಪಡುವ ಋಗ್ವೇದದ ಕಾಲದಲ್ಲಿ ಆರ್ಯರು ಪಿತೃಪ್ರಧಾನ ಸಮಾಜಕ್ಕೆ ಸೇರಿದವರಾಗಿದ್ದರು. ಹೆಂಡತಿ ಮತ್ತು ಮಕ್ಕಳ ಮೇಲೆ ಪೂರ್ಣ ಅಧಿಕಾರವನ್ನು ಚಲಾಯಿಸುತ್ತಿದ್ದರು. ಆದರೂ ಆ ಕಾಲದ ಸ್ತ್ರೀಯರ ಸ್ಥಾನಮಾನ ಉನ್ನತಮಟ್ಟದ್ದಾಗಿದ್ದಿತು. ವಿದ್ಯಾಭ್ಯಾಸದ ಹಕ್ಕು, ಧಾರ್ಮಿಕ ಸಮಾನತೆ, ವಿಧವಾ ವಿವಾಹ, ಉಪನಯನದ ಗೌರವ, ವೇದಾಧ್ಯಯನದ ಅವಕಾಶ, ವೈದಿಕ ಕರ್ಮಗಳನ್ನು ತಾವೇ ನಡೆಸುವ ಅಧಿಕಾರ ಇತ್ಯಾದಿ ಸ್ಥಾನಮಾನಗಳನ್ನು ಹೊಂದಿದ್ದಳು. ತಾಯಿಯನ್ನು ಅತ್ಯಂತ ಗೌರವ ಭಾವನೆಯಿಂದ, ದೈವಿಕ ನೆಲೆಯಿಂದ ಪರಿಭಾವಿಸಲಾಗುತ್ತಿತ್ತು. 'ಮಾತೃದೇವೋಭವ' ಎಂಬುದು ಆ ಕಾಲದ ಮಾತೃತ್ವದ ಪರಿಕಲ್ಪನೆಗೆ ಸಾಕ್ಷಿಯಾಗಿದೆ. ಆದರೆ ಅಥರ್ವಣ ವೇದದ ಕಾಲಕ್ಕಾಗಲೇ ಸ್ತ್ರೀಯರ ಸ್ಥಾನಮಾನ ಅಧಃಪತನಕ್ಕೆ ಇಳಿಯತೊಡಗಿತ್ತು. ಬಹುಪತ್ನಿತ್ವ ರೂಢಿಗೆ ಬಂದಿತ್ತು. "ಸತ್ತ ನಂತರ ಕ್ರಿಯಾಕರ್ಮಗಳಿಗೆ ಹೆಚ್ಚಿನ ಮಹತ್ವ ಬಂದಿದ್ದರಿಂದ, ಪುತ್ರ ಸಂತಾನಕ್ಕೆ ಅತಿ ಹೆಚ್ಚಿನ ಮಹತ್ವ ಬಂದಿತು. ಪುತ್ರನಿಲ್ಲದೆ ಸ್ವರ್ಗವಿಲ್ಲ. ಪುತ್ರ ಪ್ರಾಪ್ತಿಗಾಗಿಯೇ ಸ್ತ್ರೀ ಎಂಬ ಭಾವನೆ ಅಥರ್ವಣ ವೇದದ ಕಾಲಕ್ಕಾಗಲೇ ರೂಪುಗೊಂಡಿತ್ತು. ಈ ಘೋಷಣೆ ಎಷ್ಟರ ಮಟ್ಟಿಗೆ ಮುಂದುವರಿಯಿತೆಂದರೆ ಯಜ್ಞ ಯುಗಾದಿಗಳಲ್ಲಿ ಹೆಣ್ಣು ಮಗು ಬೇಡವೆಂದು ಪ್ರಾರ್ಥಿಸುವ ಸ್ತೋತ್ರಗಳು ಪ್ರಚಲಿತವಾದುವು"[೩] ಆದರೆ ಶಕ್ತಿದೇವತೆಗಳನ್ನು ಮಾತೃರೂಪದಲ್ಲಿ ಆರಾಧಿಸುವ ಪರಂಪರೆಯಂತೂ ಅನೂಚಾನವಾಗಿ ಮುಂದುವರೆಸಿಕೊಂಡು ಬಂದಿತು. ತಾಯಿಯ ಹತ್ತಿರ ನಮ್ಮ ತಪ್ಪುಗಳನ್ನು ಆಸೆಗಳನ್ನು ಎಲ್ಲವನ್ನು ತೋಡಿಕೊಳ್ಳಬಹುದು. ತಾಯಿ ತಮ್ಮನ್ನು ಕನಿಕರದಿಂದ ನೋಡಿ, ದಂಡಿಸದೆಯೇ ಉದ್ಧರಿಸುತ್ತಾಳೆ ಎಂಬ ನಂಬಿಕೆಯೇ ಮಾತೃಪೂಜೆಯ ಉಗಮಸ್ಥಾನವಾಯಿತು. ಧರ್ಮ ಸೂತ್ರದ ಆಧಾರದಿಂದ ರಚಿತವಾದ ವಿಷ್ಣು ಸ್ಮೃತಿಯೊಂದು "ತನಗೆ ಪರಿಚಿತಳಾದ ವಿವಾಹಿತ ಹೆಣ್ಣು ಮಕ್ಕಳನ್ನು ಪುರುಷನು ಕಂಡರೆ ಅವಳನ್ನು ಸೋದರಿ, ಪುತ್ರಿ ಅಥವಾ ತಾಯಿ ಎಂಬಂತೆ ಬೋಧಿಸಬೇಕು" ಎಂದು ಹೇಳುತ್ತದೆ. ಒಟ್ಟಾರೆ ಹೆಣ್ಣಿನ ಸ್ಥಾನಮಾನದ ವಿಚಾರವಾಗಿ ವೇದೋಪನಿಷತ್ತುಗಳಲ್ಲಿ ಒಂದು ಬಗೆಯ ವೈರುಧ್ಯವಿರುವುದನ್ನು ಕಾಣಬಹುದಾಗಿದೆ.

ವೇದಗಳ ಕಾಲದಲ್ಲಿ ಪೃಥ್ವಿಯನ್ನು ಮಾತೃರೂಪದಲ್ಲಿ ದೇವತೆಗಳ ರೂಪದಲ್ಲಿ ಪೂಜಿಸಲಾಗುತ್ತಿತ್ತು. ಪೃಥ್ವಿ ಮಹಾಮಾತೆ, ಸ್ಥಿರೆ ಫಲಭರಿತೆ, ಸುಭಗೆ, ತಾಳ್ಮೆ, ಕ್ಷಮಾಗುಣಗಳ ಪ್ರತೀಕವಾಗಿ – ಕ್ಷಮಾಯಾಧರಿತ್ರಿಯಾಗಿ, ಮನುಷ್ಯನನ್ನು ಕಾಪಾಡುತ್ತಿದ್ದಾಳೆಂಬ ನಂಬಿಕೆ ಇತ್ತು. ಋಗ್ವೇದದ ಒಂದು ಸೂಕ್ತದಲ್ಲಿ ಗತಿಸಿದ ಮಾನವನನ್ನು " ತಾಯಿ ಮಡಿಲನ್ನು ಸೇರು" ಎಂದು ಕೋರಲಾಗಿದೆ. ಭೂದೇವಿ ಕರುಣಾಮಯಿ; ಆಕೆಯನ್ನು ಪ್ರಾರ್ಥಿಸುತ್ತಾ ಅವಳ ಮಡಿಲನ್ನು ಸೇರಿದವನ ಮೇಲೆ ಭಾರ ಹಾಕಬಾರದೆಂದೂ, ತನ್ನ ಮಗುವನ್ನು ತಾಯಿ ನನ್ನ ವಸ್ತ್ರದಿಂದ ನಯವಾಗಿ ತನ್ನಲ್ಲಡಗಿಸಿಕೊಳ್ಳುವಂತೆ, ಮೃದುವಾಗಿ ಅವಳು ತನ್ನ ಮಡಿಲನ್ನು ಸೇರಿದವನನ್ನು ಮುಚ್ಚಬೇಕೆಂದೂ ಕೋರಲಾಗಿದೆ.(**10-18, 10-19**)[೪] ವೈದಿಕ ಆರ್ಯರಿಗೆ ಪ್ರಕಾಶಮಾನವಾದ ದೇವತೆಗಳು ಎರಡೇ. ಒಂದು ಆಕಾಶ, ಇನ್ನೊಂದು ಭೂಮಿ ಅಥರ್ವಣ ವೇದದಲ್ಲಿ **೬೩** ಮಂತ್ರಗಳಿರುವ ಒಂದು ಸೂಕ್ತದಲ್ಲಿ ಮಾತೃ ರೂಪಿಯಾದ ಭೂಮಿಯನ್ನು ಸಮಗ್ರ ಪಾರ್ಥಿವ ಪದಾರ್ಥಗಳ ಜನನಿ ಹಾಗೂ ಪೋಷಕಿಯಾಗಿ ಚಿತ್ರಿಸಲಾಗಿದೆ.

ಪ್ರಜೆಗಳ ಸಮಸ್ತ ದೋಷಗಳನ್ನು, ಕ್ಲೇಶಗಳನ್ನು, ಅನರ್ಥಗಳನ್ನು ತೊಡೆದು ಹಾಕಿ, ಸುಖ ಸಂಪತ್ತನ್ನು ಕೊಡುವುದಕ್ಕೆ ಪೃಥ್ವಿಯನ್ನು ಪ್ರಾರ್ಥಿಸುವ ಪ್ರಾರ್ಥನೆಯೊಂದು ಹೀಗಿದೆ.

"ಯಾಮಶ್ವಿನಾವಮಿಮಾತಾಂ ವಿಷ್ಣುರ್ಯಾಸ್ಯಾಂ ವಿಚಕ್ರಮೇ।
ಇಂದ್ರೋ ಯಾಂ ಚಕ್ರ ಆತ್ಮನೇನಮಿ ತ್ರಾಂ – ಶಚೀಪತಿಃ।
ಸಾ.ನೋ. ಭೂಮಿರ್ಮಿಸೃಜತಾಂ ಮಾತಾ ಪುತ್ರಾಯ ಮೇ ಪಯ: ॥"

(ಯಾವುದನ್ನು ಅಶ್ವಿನ ಅಳೆದನೋ, ಯಾವುದರ ಮೇಲೆ ವಿಷ್ಣುವು ತನ್ನ ಪಾದವನ್ನು ಇಟ್ಟನೋ, ಯಾವುದನ್ನು ಸಾಮರ್ಥ್ಯದ ಅಧಿಪತಿಯಾದ (ಶಚೀಪತಿ) ಇಂದ್ರನು ತನಗಾಗಿ ಶತ್ರುರಹಿತವನ್ನಾಗಿ ಮಾಡಿದನೋ, ಆ ಭೂಮಿಯು , ತಾಯಿಯು ತನ್ನ ಮಗುವಿಗೆ ಹಾಲನ್ನು ಕೊಡುವಂತೆ ನನಗೆ ಹಾಲನ್ನು ಕೊಡಲಿ.)

ಈ ಮಂತ್ರದಲ್ಲಿ ಭೂಮಿ ತಾಯಿಯು – ತನ್ನನ್ನು ತಾಯಿ ಮಗುವಿಗೆ ಹಾಲೂಡಿಸಿ ಸಲಹುವಂತೆ – ಸಲಹಲಿ ಎಂದು ಪ್ರಾರ್ಥಿಸುವುದನ್ನು ಕಾಣಬಹುದು. ಇಲ್ಲಿ ದೇವತೆಗಳು ನೀಡುವ ರಕ್ಷಣೆ ಒಂದು ಬಗೆಯದಾದರೆ, ಭೂಮಿತಾಯಿಯು ನೀಡುವ ರಕ್ಷಣೆ ಮತ್ತೊಂದು ಬಗೆಯದು. ವೇದ ಕಾಲದಲ್ಲಿ "ತಾವು ಯಾವ ಪೃಥ್ವಿಯ ಮೇಲೆ ವಾಸ ಮಾಡುತ್ತಿದ್ದರೋ, ಮತ್ತು ಎಲ್ಲಿ ಸುಖ ಸಮೃದ್ಧಿಯಿಂದ ಕೂಡಿದ್ದರೊ, ಆ ಪೃಥ್ವಿಯನ್ನು ಪೂಜ್ಯಳಾದ ಮಾತೆಯ ದೃಷ್ಟಿಯಿಂದ ನೋಡುವುದು" ಸ್ವಾಭಾವಿಕವಾಗಿದ್ದಿತು.

ಒಟ್ಟಾರೆ ವೇದಗಳ ಕಾಲದಲ್ಲಿ ಸ್ತ್ರೀಯ ಸ್ಥಾನಮಾನ, ಮಾತೃತ್ವದ ಪರಿಭಾವನೆ ಉನ್ನತ ನೆಲೆಯಲ್ಲಿಯೇ ಇದ್ದುದನ್ನು ಕಾಣಬಹುದಾಗಿದೆ. ಕ್ರಿ.ಶ.ದ ಆರಂಭದಲ್ಲಿ ಮನುಸ್ಮೃತಿಯು ರಚಿತವಾಗಿ ಸ್ತ್ರೀಯನ್ನು ಕೀಳಾಗಿ ಕಾಣುವಂತಹ ದೃಷ್ಟಿಕೋನವು ನಿರ್ಮಾಣವಾಯಿತಾದರೂ ಭಾರತೀಯ ಸಂಸ್ಕೃತಿಯಲ್ಲಿ ತಾಯಿಯನ್ನು ಬಹುಶಃ ಯಾವ ಕಾಲದಲ್ಲಿಯೂ ಕೀಳಾಗಿ ಕಂಡದ್ದಿಲ್ಲ. ಇಂತಹ ಸಂಸ್ಕೃತಿಯ ಮತ್ತು ಪರಂಪರೆಯ ದಟ್ಟವಾದ ಪ್ರಭಾವಕ್ಕೆ ಒಳಗಾದ ಬೇಂದ್ರೆಯವರ ಮನಸ್ಸಿನಲ್ಲಿ ಮಾತೃತ್ವದ ಪರಿಕಲ್ಪನೆಯು ಗಟ್ಟಿಯಾದ ಬೇರನ್ನು ಪಡೆದುಕೊಂಡಿತು. ಅತ್ಯಂತ ಸೂಕ್ಷ್ಮವೇದಿಯಾದ ಬೇಂದ್ರೆಯವರ ಮನಸ್ಸು ಭಾರತೀಯ ಸಂಸ್ಕೃತಿಯಲ್ಲಿ ಮಾತೃತ್ವ ಭಾವನೆಯ ಶೋಧವನ್ನು ಕೈಗೊಂಡಿತು. "ಬೇಂದ್ರೆಯವರ ಕಾವ್ಯಕ್ಕೆ ಭೂತ ಕಾವ್ಯ ಪರಂಪರೆಯ

ಸ್ಪರ್ಶವಿದೆ. ವರ್ತಮಾನ ಕಾವ್ಯದ ಹುರಿ ಇದೆ. ಭವಿಷ್ಯತ್ಕಾವ್ಯದ ಹರಹಿದೆ" ಎಂದು ವಾಮನ ಬೇಂದ್ರೆ ಅವರು ಅಭಿಪ್ರಾಯ ಪಡುತ್ತಾರೆ. ಅವರ ಬದುಕನ್ನೆಲ್ಲಾ ಆವರಿಸಿಕೊಂಡ ವೇದಾಂತ ದೃಷ್ಟಿಯು ಬಾಲ್ಯದಿಂದಲೇ ರೂಪಿತವಾದ ಒಂದು ಪ್ರಮುಖ ಮನೋಧರ್ಮವಾಗಿತ್ತು.

**ವೈದಿಕೇತರ ನೆಲೆಯಲ್ಲಿ**

ವೇದೋಪನಿಷತ್ತುಗಳ ಕಾಲದ ನಂತರವೂ ಅಂದರೆ ಪುರಾಣಗಳ ಯುಗದಲ್ಲಿ ಹೆಣ್ಣಿಗೆ ಒಂದು ವಿಶೇಷವಾದ ಅಧಿಕಾರ ದೊರಕಿತು. ಅದೇಂದರೆ ವ್ರತಗಳ ಆಚರಣೆ ಮತ್ತು ಪುರಾಣಗಳನ್ನು ಕೇಳುವ ಅಧಿಕಾರ ಮತ್ತು ಅವಕಾಶ. ವೇದಾಧ್ಯಯನ ಮತ್ತು ಅದನ್ನು ಕೇಳಲೂ ಅವಕಾಶವಿರದ ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಈ ಪುರಾಣಗಳು ವಿಶೇಷವಾದ ವರಗಳಾಗಿ ಅವರುಗಳ ಅಂತಃಶಕ್ತಿಯನ್ನು ಸಶಕ್ತಗೊಳಿಸಿದುವು. ಶಕ್ತಿದೇವತೆಗಳ ಉಪಾಸನೆಯು ಈ ಕಾಲದಲ್ಲಿ ಅತ್ಯಂತ ಹೆಚ್ಚಾಯಿತು. ಕಾಳಿಕಾಪುರಾಣ, ದೇವಿಪುರಾಣ, ಭಗವತೀಪುರಾಣ, ಚಂಡೀ ಪುರಾಣ, ಮುಂತಾದ ಶಾಕ್ತ ಪುರಾಣಗಳು ರಚಿತವಾದವು. ಋತಧ್ವಜನ ಪತ್ನಿ ಮದಲಸಾ, ಕಪಿಲ ಮುನಿಯ ಮಾತೆಯು, ಶ್ರೇಷ್ಠಮುನಿ ಪ್ರಜಾಪತಿ ಕರ್ದಮನ ಪತ್ನಿಯಾದ ದೇವಹೂತಿ, ಭಾರತೀಯ ಸ್ತ್ರೀತ್ವದ ಅಮರ ಸಂಕೇತಗಳೆನಿಸಿದ ಸತೀ ಹಾಗೂ ಉಮಾ ಇವರುಗಳು ಪುರಾಣದ ಸ್ತ್ರೀಯರಲ್ಲೆಲ್ಲಾ ಅತ್ಯಂತ ಪ್ರಸಿದ್ಧರೂ, ಪಾಂಡಿತ್ಯಪೂರ್ಣರೂ, ತಪಸ್ವಿನಿಯರೂ, ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದವರೂ, ಮಹಾ ಮಾತೆಯರೂ ಆಗಿದ್ದರು.

ಸುಮಾರು ಐದು ಸಾವಿರ ವರ್ಷಗಳ ಹಿಂದಿನಿಂದಲೂ ಜೀವಂತವಾಗಿತ್ತೆಂದು ಭಾವಿಸಲ್ಪಡುವ ಸಿಂಧೂ ಕಣಿವೆಯ ನಾಗರೀಕತೆಯಲ್ಲಿಯೂ ಸ್ತ್ರೀಯರ ಸ್ಥಾನಮಾನವು ವಿಶೇಷವಾಗಿದೆ. ಅಲ್ಲಿ ದೊರಕಿರುವ ಅನೇಕ ದೇವತಾ ವಿಗ್ರಹಗಳು ಸ್ತ್ರೀಮೂರ್ತಿಗಳಾ ಗಿರುವುದರಿಂದ ಆ ಸಮಾಜವು ಮಾತೃಪ್ರಧಾನ ಸಮಾಜವಾಗಿದ್ದಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಧರ್ಮದಲ್ಲಿ ಮಾತೃಪೂಜೆಗೆ ಅಪಾರವಾದ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಪ್ರಾಚೀನ ದ್ರಾವಿಡರಲ್ಲಿ ಪುರುಷ ಸಂಸಾರದ ಹೊರೆ ಮತ್ತು ಹೆಂಡತಿ ಮಕ್ಕಳ ಹೊಣೆಯನ್ನು ಹೊರುತ್ತಿರಲಿಲ್ಲ. ಇದು ಅಂದಿನ ಮಾತೃ ಪ್ರಧಾನ ಸಮಾಜವನ್ನು ಸೂಚಿಸುತ್ತದೆ. ಮಾತೃಪ್ರಧಾನ ಸಮಾಜದಲ್ಲಿ ಗಂಡಿನ ಪಾತ್ರ ಕೇವಲ ದೈಹಿಕವಾದುದಾಗಿತ್ತು. ಅವನಿಗೆ ಆರ್ಥಿಕ ಹೊಣೆಗಾರಿಕೆ ಇರುತ್ತಿರಲಿಲ್ಲ. ಆರ್ಯರ ಪ್ರಭಾವಕ್ಕೆ ಒಳಗಾಗುವ ಮೊದಲು ದಕ್ಷಿಣ ಭಾರತದಲ್ಲಿಯೂ ಮಾತೃ ಕೇಂದ್ರಿತ ಸಮಾಜವು ಅಸ್ತಿತ್ವದಲ್ಲಿತ್ತು. ಪ್ರಾಚೀನ ಕಾಲದಿಂದ ಇಲ್ಲಿಯವರೆವಿಗೂ ಕೇರಳದಲ್ಲಿ ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆಯು ಆಳವಾಗಿ ಬೇರು ಬಿಟ್ಟಿದೆ. ಕೇರಳದ ನಂಬೂದರಿ ಬ್ರಾಹ್ಮಣರಲ್ಲಿ, ಶೂದ್ರರಾದ ನಾಯರ್ ಜನಾಂಗಗಳಲ್ಲಿ ಮಾತೃಪ್ರಧಾನ ವ್ಯವಸ್ಥೆ ಜಾರಿಯಲ್ಲಿದೆ.

ಬೌದ್ಧಧರ್ಮದಲ್ಲಿಯೂ ಸ್ತ್ರೀಗೆ ಅತ್ಯಂತ ಉನ್ನತವಾದ ಸ್ಥಾನವೇನೂ ಇರಲಿಲ್ಲ. ಬ್ರಹ್ಮಚರ್ಯ ಶೇಷ್ಠ ಎಂದೂ, ಹೆಂಡತಿ ಮಕ್ಕಳು ಉನ್ನತ ಜೀವನಕ್ಕೆ ತೊಡಕು ಎಂದು ಬುದ್ಧನು ಭಾವಿಸಿದ್ದರೂ, ತನ್ನ ಸಾಮಾನ್ಯ ಅನುಯಾಯಿಗಳಿಗೆ ಸಾಂಸಾರಿಕ ಜೀವನವನ್ನು ನಡೆಸಲು ಅನುಮತಿಯನ್ನು ನೀಡಿದ್ದನು. ಅವರೂ ನಿರ್ವಾಣವನ್ನು ಪಡೆಯಲು ಸಾಧ್ಯ ಎಂದು ಬೋಧಿಸಿದನು. ಅವರ ಭಿಕ್ಷುಣಿಯರಲ್ಲಿ ಮಹಿಳೆಯರು ಇದ್ದರು. ಆದರೂ ಸ್ತ್ರೀಯರ ಬಗ್ಗೆ ಬುದ್ಧನಿಗೆ ಅಷ್ಟು ಗೌರವವಿರಲಿಲ್ಲ. ತನ್ನ ಸಾಕುತಾಯಿಯು ಮಹಾ ಪ್ರಜಾಪತಿ ಸಂಘವನ್ನು ಸೇರಲು ಬಯಸಿದಾಗ ಅದನ್ನು ಆತ ವಿರೋಧಿಸಿದ ಎಂದು ಒಂದು ಬೌದ್ಧ ಕತೆಯು ಹೇಳುತ್ತದೆ. "ಸಂಘವನ್ನು ಹೆಣ್ಣುಮಕ್ಕಳು ಸೇರಲು ಅವಕಾಶ ಇರದಿದ್ದರೆ ಧರ್ಮ ಸಾವಿರ ವರ್ಷ ಭದ್ರವಾಗಿರುತ್ತಿತ್ತು. ಅವರಿಗೆ ಅವಕಾಶವನ್ನು ಕೊಟ್ಟಿರುವುದರಿಂದ ಧರ್ಮ ಐದು ನೂರು ವರ್ಷಗಳವರೆಗೆ ಮಾತ್ರ ಉಳಿಯುತ್ತದೆ" ಎಂದು ಬುದ್ಧ ಭವಿಷ್ಯ ನುಡಿಯುತ್ತಿದ್ದ. "ಮಹಿಳೆಯರನ್ನು ನೋಡಬಾರದು, ನೋಡಿದರೂ ಮಾತನಾಡಬಾರದು, ಅವರೇ ಮಾತನಾಡಿಸಿದರೂ ತುಂಬಾ ಜಾಗ್ರತರಾಗಿರಬೇಕು" – ಇದು ಬುದ್ಧನು ತನ್ನ ಭಿಕ್ಷುಗಳಿಗೆ ನೀಡಿದ ಬೋಧನೆ ಮತ್ತು ಮಾರ್ಗದರ್ಶನ. ಆದರೂ ಭಾರತದಲ್ಲಿ ಬೌದ್ಧ ಧರ್ಮದಲ್ಲಿನ ಮಹಿಳೆಯರ ಸ್ಥಾನಮಾನ ಪ್ರಬಲವಾಗಿ ಇದ್ದು ಸಮಕಾಲದಲ್ಲಿನ ಹಿಂದೂ ಮಹಿಳೆಯರ ಸ್ಥಾನಮಾನಕ್ಕಿಂತ ಉತ್ತಮವಾಗಿತ್ತು. ತಂದೆ ತಾಯಿಗಳ ಬಗ್ಗೆ ಬುದ್ಧನಿಗೆ ಉನ್ನತವಾದ ವಿಚಾರಗಳೇ ಇದ್ದುವಾದರೂ, ಅವನಿಗೆ ತಾಯಿಗಿಂತ ತಂದೆಯ ಮೇಲೆ ಹೆಚ್ಚಿನ ಗೌರವವಿತ್ತು. "ಯಾವ ಕುಟುಂಬದಲ್ಲಿ ತಂದೆ–ತಾಯಿಯರು ಗೌರವದಿಂದ ಕಾಣಲ್ಪಡುತ್ತಾರೋ ಅದು ಬ್ರಹ್ಮನ ಸ್ವರ್ಗಕ್ಕೆ ಸಮಾನವಾದುದು. ಅಂತಹ ಕುಟುಂಬಗಳು ಗೌರವಕ್ಕೆ ಪಾತ್ರವಾಗಿವೆ. ತಂದೆ ತಾಯಿಯವರನ್ನು ಬ್ರಹ್ಮ ಎಂದು ಕರೆಯಲಾಗುತ್ತದೆ ಏಕೆಂದರೆ ತಂದೆ ತಾಯಿಯರು ಮಕ್ಕಳಿಗಾಗಿ ಏನು ಬೇಕಾದರೂ ಮಾಡುತ್ತಾರೆ. ಅವರು ಮಕ್ಕಳನ್ನು ಹೆತ್ತು, ಸಾಕಿ, ಸಲಹಿ, ಜಗತ್ತಿಗೆ ಅವರನ್ನು ಪರಿಚಯಿಸುತ್ತಾರೆ"[೫] ಎಂದು ತನ್ನ ಭಿಕ್ಷುಗಳಿಗೆ ಬೋಧಿಸಿದನು. ಹೀಗೆ ಬುದ್ಧನು ತಂದೆ ತಾಯಿಯನ್ನು ಗೌರವಿಸಿದರೂ, ಅವನೊಳಗೆ ಹೆಣ್ಣಿನ ಬಗ್ಗೆ ಅದೆಲ್ಲೋ ಒಂದು ಬಗೆಯ ಕೀಳರಿಮೆ ಇದ್ದುದನ್ನು ನಾವು ಆ ಕಾಲದ ಅನೇಕ ವಿವರಗಳಿಂದ ಗ್ರಹಿಸಬಹುದಾಗಿದೆ.

ಜೈನ ಧರ್ಮದಲ್ಲಿ ಮಹಿಳೆಯರಿಗೆ ಸನ್ಯಾಸಿನಿಯರ ಸಂಘವನ್ನು ಸೇರಲು ಅವಕಾಶವಿದ್ದರೂ, ಅವರು ಜನ್ಮಾಂತರಗಳಲ್ಲಿ ಪುರುಷರಾಗಿ ಹುಟ್ಟದೆ ಪೂರ್ಣತೆಯನ್ನು ಪಡೆಯಲಾರರು ಎಂಬ ನಂಬಿಕೆಯಿತ್ತು. ಪೂರ್ಣತೆಗೆ ದಿಗಂಬರತ್ವ ಅತ್ಯಾವಶ್ಯಕ ಎಂದು ಭಾವಿಸಿದ್ದೇ ಈ ನಂಬಿಕೆಗೆ ಕಾರಣವಾಗಿತ್ತು. ಜೈನ ಧರ್ಮದಲ್ಲಿಯೂ ಮಹಿಳೆಯವರು ಕೀಳೆಂದು ಪರಿಗಣಿಸಲಾಗುತ್ತಿತ್ತು. "ಮಹಿಳೆಯರು ದುರ್ಬಲರು ಮತ್ತು ಚಂಚಲ ಚಿತ್ತರೂ ಆಗಿರುವುದರಿಂದ ಅವರಿಗೆ 'ಮಹಾ ಪರಿಜ್ಞಾನ' 'ಅರುಣೋಪ ಪಟ' ಮತ್ತು 'ದೃಷ್ಟಿವಾದ' ದ ಕೆಲವು ಅಧ್ಯಾಯಗಳನ್ನು ಅಧ್ಯಯನ ಮಾಡಲು ಅನುಮತಿ ಇಲ್ಲ. ಮೂರು ವರ್ಷ ಅನುಭವವುಳ್ಳ ಸನ್ಯಾಸಿಯು ಮೂವತ್ತು ವರ್ಷ ಅನುಭವದ ಸನ್ಯಾಸಿನಿಗೆ ಗುರುವಾಗುವ ಅರ್ಹತೆಯನ್ನು ಪಡೆದಿರುತ್ತಾನೆ" [೬] ಎಂದು ನಿಯಮ ಮಾಡುವ ಹಂತಕ್ಕೆ ಅದು ತಲುಪಿತು. ಆದರೂ ಹಿಂದೂ ಧರ್ಮಕ್ಕಿಂತ ಜೈನಧರ್ಮದಲ್ಲಿ ಮಹಿಳೆಯ ಬಗ್ಗೆ ಹೆಚ್ಚು ಸಹಾನುಭೂತಿಯನ್ನು ತೋರಿಸಲಾಗುತ್ತಿತ್ತು. ಆಕೆಯಿಂದ ವಂಶಾಭಿವೃದ್ಧಿ ಆಗುತ್ತದೆಂಬ ಕಾರಣದಿಂದ ಸಾಮಾನ್ಯ ಜೈನರು ಮಹಿಳೆಯರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಮಾತೃತ್ವದಿಂದ ಹೆಣ್ಣಿನ ಸ್ಥಾನಮಾನವು ಔನ್ನತ್ಯಕ್ಕೆ ಏರುತ್ತಿತ್ತು. ಮಹಿಳೆಯರ ಬಗ್ಗೆ ಸಾಮಾನ್ಯ ಅಭಿಪ್ರಾಯ ಏನೇ ಇರಲಿ, ಅತ್ಯಂತ ಉಗ್ರ ಟೀಕಾಕಾರರೂ ತಾಯಿಯನ್ನು ಶ್ರೇಷ್ಠ ಸ್ಥಾನದಲ್ಲಿಟ್ಟು ಗೌರವಿಸುತ್ತಿದ್ದರು. ಬ್ರಹ್ಮಚರ್ಯದೊಂದಿಗೆ ತಾಯಿತನದ ಸಂಬಂಧವನ್ನೇರ್ಪಡಿಸುವುದು ತಪ್ಪೆಂದು ಭಾವಿಸುತ್ತಿದ್ದ ಜೈನರು ತೀರ್ಥಂಕರರ ತಾಯಂದಿರನ್ನು ಶ್ರೇಷ್ಠವಾದ ಗೌರವದ ಸ್ಥಾನವನ್ನಿತ್ತು ಆರಾಧಿಸುತ್ತಾರೆ. ಮಹಾವೀರನ ತಾಯಿಯಾದ ತ್ರಿಶಲದೇವಿಯು ವಿಶೇಷವಾಗಿ ಜೈನ ಸಂತರ ಚರಿತ್ರೆಯಲ್ಲಿ ಅತ್ಯಂತ ಗೌರವದ ಸ್ಥಾನವನ್ನು ಪಡೆದಿದ್ದಾರೆ.

'ಮಾತೃಪೂಜೆ'ಯನ್ನು ' ಮಾತೃಪ್ರಧಾನ ಕುಟುಂಬ' ವ್ಯವಸ್ಥೆಯನ್ನು ನಾವು ಜಗತ್ತಿನಾದ್ಯಂತ ಕ್ರಿಸ್ತ ಪೂರ್ವದಿಂದಲೇ ಗುರುತಿಸಬಹುದಾಗಿದೆ. ಅದು ಯೂರೋಪ್‌ನಲ್ಲಿ ಪ್ರಚಲಿತವಿದ್ದ ಧರ್ಮಗಳ ಒಂದು ಭಾಗ ಆಗಿತ್ತು. ಗ್ರೀಸ್, ರೋಮ್, ಐರ್ಲೆಂಡ್, ಜರ್ಮ್ಯಾನಿಕ್, ಯೋರೋಪ್‌ಗಳಲ್ಲೂ

ಮಾತೃ ಪೂಜೆ ಪ್ರಬಲವಾದ ಆಚರಣೆಯಾಗಿತ್ತು. ಅಂತೆಯೇ ಭಾರತದಲ್ಲಿಯೂ ವೈದಿಕ ಸಂಸ್ಕೃತಿ ಹರಡುವುದಕ್ಕೆ ಮೊದಲೇ ಶಕ್ತಿಪಂಥವಿದ್ದು, ಶಕ್ತಿ ಪೂಜೆ ನಡೆಯುತ್ತಿದ್ದುದಕ್ಕೆ ಆಧಾರಗಳವೆ. ಇದರ ಬಗ್ಗೆ 'Evolution of Mother worship in India' ಎನ್ನುವ ಲೇಖನದಲ್ಲಿ ಶಶಿಭೂಷಣ್ ದಾಸ್‌ಗುಪ್ತ ಅವರು ಹೀಗೆ ಹೇಳಿದ್ದಾರೆ. "ಮಾನವ ಶಾಸ್ತ್ರಜ್ಞರ (Anthropologists) ಅಭಿಪ್ರಾಯದಂತೆ ಮಾನವರ ಎಲ್ಲ ಧಾರ್ಮಿಕ ಕ್ರಿಯೆಗಳಿಗೆ, ನಾಗರಿಕತೆಯ ಆದಿಯಲ್ಲಿ ಮಾನವನಲ್ಲಿ ಮನೆ ಮಾಡಿಕೊಂಡಿದ್ದ ಭಯ ಮಿಶ್ರಿತ ಆಶ್ಚರ್ಯವೋ ಇಲ್ಲವೆ ನಮ್ಮ ಅಸಂಸ್ಕೃತ ಅಥವಾ ಸುಸಂಸ್ಕೃತ ಮೌಲ್ಯಗಳೋ ಇವೇ ಚಾಲಕ ಶಕ್ತಿ. ಕೆಲವೊಂದು ಮತಾಚರಣೆಗಳಿಂದ, ವಿಧಿ ವಿಧಾನಗಳಿಂದ ಮಾತೃಪೂಜೆ, ತಾಯಿಯೇ ಪ್ರಮುಖ ವ್ಯಕ್ತಿಯಾಗಿದ್ದ ಮಾತೃಮೂಲ ಕುಟುಂಬ ಪದ್ಧತಿಯಿದ್ದ ಸಾಮಾಜಿಕ ಪರಿಸರದಲ್ಲಿ ಒಂದು ಧಾರ್ಮಿಕ ಸಂಪ್ರದಾಯ ಸಮಾರಂಭವಾಗಿ ಬೆಳೆಯಿತು. ತಾಯಿಗಿದ್ದ ಪ್ರಧಾನ ಸ್ಥಾನಮಾನಗಳೇ ಆಕೆಯನ್ನು ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯ ಶಕ್ತಿ ಸಂಕೇತವನ್ನಾಗಿಸಿದವು. ಇದರಿಂದಾಗಿ ಮಾತೃಮೂಲ ಪದ್ಧತಿಯ ಚೌಕಟ್ಟಿನೊಳಗಿದ್ದ ಪುರುಷರು ಭಯಾಶ್ಚರ್ಯಗಳಿಂದ ಕೂಡಿದವರಾಗಿ ಬಂದು ಅಲೌಕಿಕ ಶಕ್ತಿಯನ್ನು ರೂಪಿಸಿಕೊಳ್ಳಲಾರಂಭಿಸಿದಾಗ, ಸಹಜವಾಗಿಯೇ ಆ ಶಕ್ತಿಯನ್ನು ಮಾತೃಶಕ್ತಿಯನ್ನಾಗಿ ರೂಪಿಸಿಕೊಂಡರು".[೭] ಆ ಸಮಯದಲ್ಲಿ ಭಾರತದಾದ್ಯಂತ ಮಾತೃಪೂಜೆ, ಶಕ್ತಿ ಪೂಜೆ ವ್ಯಾಪಕವಾಗಿ ನಡೆಯುತ್ತಿದ್ದಿತು. ಹೊರದೇಶಗಳಲ್ಲಿ ಈ ಮಾತೃದೇವತೆಗಳನ್ನು ಸಂತಾನಕ್ಕಾಗಿ, ಗರ್ಭಿಣಿ ಸ್ತ್ರೀಯರ ಸುಖ ಪ್ರಸವಕ್ಕಾಗಿ, ಪ್ರೇಮಕ್ಕಾಗಿ, ಸೌಂದರ್ಯಕ್ಕಾಗಿ ಆರಾಧಿಸುತ್ತಿದ್ದರು. ಮಾತೃಪೂಜೆಯು ಪ್ರಾಚೀನ ನಾಗರಿಕತೆಗಳಲ್ಲೆಲ್ಲ ವ್ಯಾಪಕವಾಗಿ ಹಬ್ಬಿದ್ದ ಧಾರ್ಮಿಕ ವಿಧಿ ಎಂಬುದು ನಿರ್ವಿವಾದ. ಭಾರತದಲ್ಲಿಯೂ ಮಾತೃಪೂಜೆ, ನಾಗಪೂಜೆ, ಕುಲದೇವತೆಗಳ ಪೂಜೆ, ವೃಕ್ಷಪೂಜೆ, ಧಾನ್ಯ ದೇವತೆಯರ ಪೂಜೆ, ಭೂಮಿಪೂಜೆ, ಸಂತಾನೋತ್ಪತ್ತಿಗಾಗಿ ಪೂಜೆ ಇವುಗಳು ಆಚರಣೆಯಲ್ಲಿದ್ದವು. ಶಕ್ತಿ ಪೂಜೆಗಾಗಿ ನವರಾತ್ರಿಯು ನಿಯೋಜಿತವಾಗಿರುವುದನ್ನು ಕಾಣಬಹುದಾಗಿದೆ.

ಜೈನ ಧರ್ಮದಲ್ಲಿಯೂ 'ಮಾತೃಪೂಜೆ' ಆಚರಣೆಯಲ್ಲಿದ್ದಿತು. ಲೌಕಿಕವಾದ ಕಷ್ಟಗಳನ್ನು ಹೋಗಲಾಡಿಸಿಕೊಳ್ಳಲು ಈ ಸ್ತ್ರೀ ದೇವತೆಗಳನ್ನು ಪೂಜಿಸುತ್ತಿದ್ದರು, ಬೌದ್ಧರಲ್ಲಿಯೂ 'ಮಾತೃಪೂಜೆ' ಅಸ್ತಿತ್ವದಲ್ಲಿತ್ತು. 'ತಾರಾಭಗವತಿ' ಪ್ರಸಿದ್ಧವಾದ ಬೌದ್ಧ ದೇವತೆಯಾಗಿದ್ದಳು. ಈಕೆ ಹರಿ, ಕರಿ, ಶಿಖಿ, ಫಣಿ, ತಸ್ಕರ, ಜಳ, ಅರ್ಣವ, ಪಿಶಾಚಿಗಳ ಭಯವನ್ನು ಹೋಗಲಾಡಿಸುವವಳೂ, ಜಗತ್ತಿನ ರಕ್ಷಕಳೂ, ದುರ್ಬಲರಿಗೆ ಶಕ್ತಿದಾಯಕಳೂ ಎಂದು ವರ್ಣಿಸಲ್ಪಟ್ಟಿದ್ದಾಳೆ. ಪಾಪನಾಶಿನಿಯಾದ ಈಕೆ ಜ್ಞಾನ ಸಮುದ್ರವನ್ನು ಮಥಿಸಿದ್ದರಿಂದ ಹುಟ್ಟಿದವಳೆಂದು ಭಾವಿಸಲ್ಪಟ್ಟಿದ್ದಾಳೆ. ಇವಳು ಬುದ್ಧನಿಗೆ ವೈಭವವನ್ನು ಕೊಟ್ಟವಳು, ಬೋಧಿ ಸ್ವರೂಪಳು ಎಂಬುದು ಬೌದ್ಧರ ನಂಬಿಕೆಯಾಗಿತ್ತು.

ಜನಪದ ಸಾಹಿತ್ಯದಿಂದ ಜನರ ಜನಮನವನ್ನು ತುಂಬಿ ನಿಂತಿರುವ ಮಾತೃದೇವತೆಗಳ ಬಗ್ಗೆ ತಿಳಿಯಬಹುದಾಗಿದೆ. ಇಲ್ಲಿ ಕಾಳಿ, ಚಾಮುಂಡಿ, ದುರ್ಗಿ ಮಾರಮ್ಮ, ಯಲ್ಲಮ್ಮ ಇವರುಗಳು ಊರನ್ನು ಕಾಯುವ ದೇವತೆಗಳಾಗಿದ್ದಾರೆ. ಜನಪದ ಕಥೆಗಳಲ್ಲೂ ಪುರಾಣದ ಕಥೆಗಳು ಬೆಸೆದು ಕೊಂಡಿರುವುದನ್ನು ಕಾಣಬಹುದಾಗಿದೆ. ಭಯಾನಕ ರೋಗ, ಪಿಡುಗುಗಳು, ಬರಗಾಲ, ಕ್ಷಾಮ ಬಂದಾಗಲು ಜನ ಜಾತಿ ಭೇಧ'ವನ್ನು ಮರೆತು ಮಾರಮ್ಮ, ಪ್ಲೇಗು ಮಾರಿ, ಸಿಡುಬುಮಾರಿಯರ ಶರಣು ಹೋಗುತ್ತಾರೆ. ಜಾತ್ರೆಗಳಲ್ಲಿ, ಪೂಜೆಗಳಲ್ಲಿ ಪ್ರಾಣಿಬಲಿಯನ್ನು ಕೊಡುತ್ತಾಥು ಒಟ್ಟಾರೆ ಭಾರತದಲ್ಲಿರುವಷ್ಟು ವ್ಯಾಪಕವಾಗಿ ವೈವಿಧ್ಯ ಪೂರ್ಣವಾಗಿ, ಪ್ರಬಲವಾದ ಒಂದು ಪಂಥವೇ ಆಗಿದ್ದ ಮಾತೃಪೂಜೆಯು ಜಗತ್ತಿನ ಇನ್ನಾವ ದೇಶದಲ್ಲೂ ಇಲ್ಲವೆಂದೇ ಹೇಳಬಹುದಾಗಿದೆ.

ಆರಂಭದಲ್ಲಿದ್ದ ಲೈಂಗಿಕ ಸ್ವಚ್ಛಂದತೆಯೇ ಮಾತೃಪ್ರಧಾನ ಪರಿಕಲ್ಪನೆಯನ್ನು, ಮಾತೃ ಅಧಿಕಾರವನ್ನು ಕುರಿತ ದೃಷ್ಟಿಕೋನವನ್ನು ರೂಪಿಸಿತೆಂದು ಬಾಹೊಫೆನ್ ಎಂಬ ಪಾಶ್ಚಾತ್ಯ ಚಿಂತಕರು ಅಭಿಪ್ರಾಯ ಪಡುತ್ತಾರೆ. ಲೈಂಗಿಕ ಸ್ವಚ್ಛಂದತೆಯು ಇದ್ದುದರಿಂದ ಮಗುವಿನ ತಂದೆ ಯಾರೆಂಬುದು ಖಂಡಿತವಾಗಿ ತಿಳಿಯುತ್ತಿರಲಿಲ್ಲ ವಾದುದರಿಂದ ತಾಯಿಗೆ ಪ್ರಾಮುಖ್ಯತೆ ಬಂದಿತು. ಆದಿಯಲ್ಲಿ ಎಲ್ಲಾ ಪ್ರಾಚೀನ ಜನತೆಗಳ ಮಧ್ಯೆಯೂ ಇದೇ ಪರಿಸ್ಥಿತಿ ಇದ್ದಿತು. ತಾಯಂದಿರೇ ಯುವಪೀಳಿಗೆಯ ಜನ್ಮದಾತಳಾಗಿದ್ದರಿಂದ, ಅವಳನ್ನು ಅತ್ಯಂತ ಗೌರವಾದರಗಳಿಂದ ನೋಡಿಕೊಳ್ಳಲಾಗುತ್ತಿತ್ತು. ತಾಯಿಯ ಮೂಲಕ ವಂಶವು ಬೆಳೆಯುತ್ತಿದ್ದು, ಉತ್ತರಾಧಿಕಾರತ್ವವು ಮಹಿಳೆಗೆ ದಕ್ಕುತ್ತಿತ್ತು. ಈ ವ್ಯವಸ್ಥೆಯು ಹೆಣ್ಣಿನಿಂದ ಮಾತೃತ್ವವನ್ನು ನಿರೀಕ್ಷಿಸುವ, ಅಪೇಕ್ಷಿಸುವ, ಒತ್ತಾಯಿಸುವ ಸ್ಥಿತಿಯನ್ನು ಸೃಷ್ಟಿಸಿದ್ದು; ಮಕ್ಕಳಾಗದ ಹೆಣ್ಣಿನ ಬಗ್ಗೆ, ಅವಳ ಸ್ಥಾನಮಾನದ ಬಗ್ಗೆ ವಿಶ್ಲೇಷಿಸುವುದಿಲ್ಲ. ಆದರೂ ಕುಟುಂಬದಲ್ಲಿ ತಾಯಿಯ ಹಕ್ಕು ಚಲಾವಣೆಯಲ್ಲಿ ಇದ್ದು, ಹೆಣ್ಣಿಗೆ ಅಧಿಕಾರಯುತವಾದ ಸ್ಥಾನವನ್ನು ನೀಡಿದ್ದರು.

ದೇವೀಪ್ರಸಾದ ಚಟ್ಟೋಪಾಧ್ಯಾಯರು ಭಾರತೀಯ ಚಿಂತನೆಯಲ್ಲಿ ಮಾತೃಪ್ರಧಾನ ಪರಿಕಲ್ಪನೆಯನ್ನು ವಿವರಿಸುತ್ತಾರೆ. ಅವರು ಈ ಕೆಲವು ಅಂಶಗಳಿಂದ ಮಾತೃಪ್ರಧಾನತೆಯನ್ನು ಗುರುತಿಸುತ್ತಾರೆ.

೧. ತಾಯಿಯ ವಂಶದಿಂದ ಮಕ್ಕಳನ್ನು ಗುರುತಿಸುವುದು.

೨. ಸಂಪತ್ತಿನ ಉತ್ತರಾಧಿಕಾರತ್ವ ಸ್ತ್ರೀಯರದ್ದಾಗಿರುತ್ತದೆ.

೩. ಮದುವೆಯಾದ ನಂತರವೂ ಹೆಣ್ಣಿನ ವಾಸಸ್ಥಾನವು ತವರು ಮನೆಯೇ ಆಗಿರುವುದು.

೪. ಸಂಖ್ಯೆಯ ದೃಷ್ಟಿಯಿಂದ ಸ್ತ್ರೀ ದೇವತೆಗಳು ಪ್ರಧಾನವಾಗಿರುವುದು

೫. ಮಹಿಳೆಯರು ಶಾಸನಾಧಿಕಾರಿಗಳಾಗಿರುವುದು.

೬. ಧಾರ್ಮಿಕ ಕ್ಷೇತ್ರಗಳಲ್ಲಿ ಸ್ತ್ರೀ ಪುರೋಹಿತರಿಗೆ ಮನ್ನಣೆ.

ಸ್ತ್ರೀಯು ಪ್ರಜನನ ಕ್ರಿಯೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದುದರಿಂದ ಕುಟುಂಬದ ಯಜಮಾನಿಯಾಗಿ, ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡಳು. ಆದಿ ಸಮಾಜದಲ್ಲಿ ಹೆಣ್ಣನ್ನು 'ಮಾತಾ' ಎಂದು ಸಂಬೋಧಿಸುತ್ತಿದ್ದದನ್ನು ಕಾಣಬಹುದಾಗಿದೆ. ಅಲ್ಲಿ ಸ್ತ್ರೀ ಎಂಬ ಅಂಗ ವಾಚಕವೇ ಇರಲಿಲ್ಲವೆಂದು ಭಾಸವಾಗುತ್ತದೆ. ಇಲ್ಲಿ ಹೆಣ್ಣನ್ನು 'ಮನುಷ್ಯ'ಳಾಗಿ ಗ್ರಹಿಸದೆ, ಕೇವಲ ಅವಳನ್ನು 'ಪ್ರಜೋತ್ಪಾದಕ' ಸರಕನ್ನಾಗಿ ಗುರುತಿಸುತ್ತಾರೆ ಎಂದು ಸ್ತ್ರೀ ವಾದಿಗಳು ಭಾವಿಸುತ್ತಾರೆ. ಮಾತೃತ್ವವು ಹೆಣ್ಣಿನ ಒಂದು ಶೋಷಣೆಯೆಂದು ಭಾವಿಸುತ್ತಾರೆ. ಮಗುವನ್ನು ಪಡೆಯಲು ಬೇರೆ ಯಾವುದಾದರೂ ಮಾರ್ಗ ಹೆಣ್ಣಿಗಿದ್ದಿದ್ದರೆ, ಆಕೆ ಖಂಡಿತವಾಗಿಯೂ, ಗರ್ಭಾವಸ್ಥೆಯ, ಪ್ರಸವದ, ಮಗುವಿಗೆ ಹಾಲೂಡುವ, ಪಾಲನೆ ಪೋಷಣೆಯ

ಶಾರೀರಿಕ ತೊಂದರೆಗಳನ್ನು ಸ್ವೀಕರಿಸುತ್ತಿರಲಿಲ್ಲ ಎಂದು ಅಭಿಪ್ರಾಯಪಡುತ್ತಾರೆ. ಆದರೆ ಈ ವಾದವು ಅತಿರೇಕದ್ದು ಎನಿಸುತ್ತದೆ. ಮಾತೃತ್ವವು ಹೆಣ್ತನದ ಪೂರ್ಣತೆ ಎಂದೇ ಎಲ್ಲರೂ ಭಾವಿಸುವುದನ್ನು ಕಾಣಬಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಂತೂ ಆದರ್ಶ ಮತ್ತು ಪರಿಪೂರ್ಣ ಮಹಿಳೆ ತಾಯಿಯಾಗಿದ್ದಾಳೆ. "ತಾಯಿ" ಎಂಬ ಪದವು ಹೆಣ್ಣಿನ ಸೌಮ್ಯ ಮುಖವನ್ನು ಮಾತ್ರ ಎತ್ತಿ ಹಿಡಿಯುತ್ತದೆ. ತಾಯಿಗೆ ಪ್ರೀತಿ, ಕ್ಷಮೆ, ಸಹನೆ, ಸೇವೆ, ಕಷ್ಟಸಹಿಷ್ಣುತೆ ಮೊದಲಾದ ಗುಣಗಳಿರುತ್ತವೆ. ಈ ಹಿನ್ನೆಲೆಯಲ್ಲಿಯೂ ಭಾರತೀಯ ಸಂಸ್ಕೃತಿಯಲ್ಲಿ ಮಾತೃತ್ವದ ವೈಭವೀಕರಣ, ಆರಾಧನಾ ಪ್ರಕ್ರಿಯೆ ಇವುಗಳನ್ನು ನಾವು ಕಾಣಬಹುದಾಗಿದೆ. ಮಗುವಿಗೆ ಜನ್ಮವೀಯುವುದು, ಪಾಲನೆ, ಪೋಷಣೆ ಇವುಗಳು ತಾಯಿಯ ಅಥವಾ ಮಾತೃತ್ವದ ಸಾಮಾಜಿಕ ಜವಾಬ್ದಾರಿಯಾಗಿದೆ. ಈ ಹೆಣ್ಣು ಮನುಷ್ಯನ ಬದುಕಿನ ಆಗುಹೋಗುಗಳಿಗೆ ಪ್ರೇರಕ ಶಕ್ತಿಯೆಂದು ಭಾವಿಸಿ, ಆಕೆಯನ್ನು ಶಕ್ತಿಯ ಮೂಲ, ಆದಿಶಕ್ತಿ, ಜಗನ್ಮಾತೆ ಎಂದೆಲ್ಲಾ ಭಾವಿಸಿ ಭಕ್ತಿಯಿಂದ ಮಾತೃ ದೇವತಾರಾಧನೆಯನ್ನು ನಡೆಸಿದರು.

ಹೀಗೆ ಭಾರತೀಯ ಸಂಸ್ಕೃತಿಯಲ್ಲಿನ ಮಾತೃತ್ವದ ಪರಿಕಲ್ಪನೆ, ಮಾತೃಪೂಜೆ, ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆ ಇವುಗಳ ಸ್ಥೂಲವಾದ ವಿವರಗಳನ್ನು ಸಂಗ್ರಹಿಸಬಹುದಾಗಿದೆ.

**ಅಡಿಟಿಪ್ಪಣಿಗಳು**

೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಹೆಚ್.ತಿಪ್ಪೇರುದ್ರಸ್ವಾಮಿ, ಪುಟ–೮.

೨. ಅದೇ, ಪುಟ–೧೨.

೩. Woman in the Vedic age, Shakuntala Shastri rao, P.No. 34-35. (ಉಲ್ಲೇಖ, ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ–ಒಂದು ಅಧ್ಯಯನ, ಜಿ.ಕೃಷ್ಣಪ್ಪ, ಪುಟ – ೧೯).

೪. ಮಾತೃಪೂಜೆ, ಚಿ.ನಾ. ಮಂಗಳ, ಪುಟ ೩.

೫. ಭಾರತೀಯ ಮಹಿಳೆಯ ಸಾಂಸ್ಕೃತಿಕ ಇತಿಹಾಸ, ಬಿ.ವಿ.ವೀರಭದ್ರಪ್ಪ, ಪುಟ – ೬೫.

6. Life in Ancient India as Depicted in the Jain Canons – J.C.Jain ಉಲ್ಲೇಖ : ಭಾರತೀಯ ಮಹಿಳೆಯ ಸಾಂಸ್ಕೃತಿಕ ವಿಕಾಸ. ಬಿ.ಎಂ. ವೀರಭದ್ರಪ್ಪ)

೭. ಮಾತೃಪೂಜೆ, ಚೀನಾ ಮಂಗಳ.